**<u>ಅಸಲು ದಾವಾ ಸಂಖ್ಯೆಃ 284/2013</u>** **ಡಿ.ಡಬ್ಲ್ಯೂ:- 2**

ದಿನಾಂಕಃ **14.03.2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು:- ವಾದಿ ಪರ ಶ್ರೀ.ಕೆ.ಪಿ.ಓ ವಕೀಲರಿಂದ:-</u>

ಗುಡ್ಡೇಹಳ್ಳಿ ಗ್ರಾಮದಲ್ಲಿ ನನ್ನ ಅಜ್ಜ ಶಿವಪ್ಪನವರು ತನ್ನ ಪಿತ್ರಾರ್ಜಿತ ಆಸ್ತಿಯಲ್ಲಿ ಮಕ್ಕಳಿಗೆ ಹಿಸ್ಸೆಯನ್ನು ನೀಡಿದ್ದು, ಅದರಂತೆ ಮ್ಯುಟೇಷನ್ ಖಾತೆಯು ವಾದಿ, 2 ನೇ ಪ್ರತಿವಾದಿ ಮತ್ತು ಪರಮೇಶ್ವರಪ್ಪ ಮತ್ತು ಲೋಕೇಶಪ್ಪರವರ ಹೆಸರಿಗೆ ವರ್ಗಾವಣೆ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯನ್ನು ಸಾಕ್ಷಿಯು ಅದನ್ನು ತಾತ್ಕಾಲಿಕ ಮ್ಯುಟೇಷನ್ ಎಂದು ಒಪ್ಪಿಕೊಂಡಿದ್ದು, ಅದನ್ನು ಈಗ ನಿಪಿ 51 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಪಂಚಾಯತ್ ನ ತಾತ್ಕಾಲಿಕವಾಗಿ ಮಾಡಿದ ಹೌಸ್ ಲಿಸ್ಟ್ ಎಕ್ಸ್ಟ್ರಾಕ್ಟ್ ಎಂದು ಸಾಕ್ಷಿಯು ಒಪ್ಪಿಕೊಂಡಿದ್ದು, ಅದನ್ನು ಈಗ ನಿಪಿ 52 ಎಂದು ಗುರುತಿಸಲಾಯಿತು. ಸರ್ವೆ ನಂ.112/1 ಎಂದು ಇತ್ತು, ಅದು ಈಗ ಸರ್ವೆ ನಂ.112/41 ಎಂದು ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಸರ್ವೆ ನಂ.112/41 ರ ಪಹಣಿ ಎಂದು ಒಪ್ಪಿಕೊಂಡಿದ್ದು, ಅದನ್ನು ಈಗ ನಿಪಿ 53 ಎಂದು ಗುರುತಿಸಲಾಯಿತು. ಮುಂದುವರೆದು ಸಾಕ್ಷಿಯು ಪೋಡಿ ಪ್ರಕಾರ ಸರ್ವೆ ನಂ.112/41 ಆಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆ ಮಲ್ಲಪ್ಪ ಹೊನ್ನಾಳಿಯಲ್ಲಿ ದಿಃ 10.12.1985 ರಲ್ಲಿ 2 ಸೈಟ್ ಗಳನ್ನು ಖರೀದಿ ಮಾಡಿರುತ್ತಾರೆಂದರೆ ಗೊತ್ತಿಲ್ಲ. ಸೈಟ್ ನಂ.1063 ಮತ್ತು 1064 ನೇ ನಂಬರ್ ನ ಸೈಟ್ ಗಳನ್ನು ಖರೀದಿ ಮಾಡಿರುತ್ತಾರೆಂದರೆ ಗೊತ್ತಿಲ್ಲ. ಈಗಲೂ ಸಹ ಸದರಿ ಸೈಟ್ ಗಳು ನನ್ನ ತಾಯಿಯ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ಸರ್ವೆ ನಂ.112/1 ರಲ್ಲಿ ವಾದಿ ಮತ್ತು ನನ್ನ ತಂದೆಗೆ 6 ½ ಮತ್ತು 6 ½ ಗುಂಟೆ ಸಮನಾಗಿ ಬಂದಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಬಂದಂತಹ 6 ½ ಗುಂಟೆಯನ್ನು ವಾದಿಗೆ ಬಿಟ್ಟುಕೊಟ್ಟು ಅವರಿಂದ 4,000 ರೂ ಗಳ ಹಣವನ್ನು ಪಡೆದಿರುತ್ತಾರೆಂದರೆ ಸರಿಯಲ್ಲ. ಸದರಿ ವಾದಿಯಿಂದ ಪಡೆದ 4,000 ರೂ ಗಳ ಹಣದಿಂದಲೇ ನನ್ನ ತಂದೆ ದಿಃ 10.12.1985 ರಲ್ಲಿ 2 ಸೈಟ್ ಗಳನ್ನು ಖರೀದಿ ಮಾಡಿರುತ್ತಾರೆಂದರೆ ಸರಿಯಲ್ಲ. ನ್ನನ ಅಜ್ಜ ಶಿವಪ್ಪರವರಿಗೆ ದಿಃ 09.07.1991 ರಂದು ಸರ್ವೆ ನಂ.85 ರಲ್ಲಿ 1 ಎಕರೆ 6 ಗುಂಟೆ ಜಮೀನನ್ನು ಇದ್ದು, ಬಗರ್ ಹುಕುಂ ನಲ್ಲಿ ಮಂಜೂರಾತಿಗಾಗಿ ಬೇರೆ ಜಮೀನಿಗಾಗಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಬಗರ್ ಹುಕುಂ ಗಾಗಿ ಸಲ್ಲಿಸಿದ್ದ ಅರ್ಜಿಯಲ್ಲಿ ವಾದಿ, ಪ್ರತಿವಾದಿ ಮತ್ತು ನಮ್ಮ ಅಜ್ಜ ಶಿವಪ್ಪರವರು ಬೇರೆ ಬೇರೆಯಾಗಿದ್ದಾರೆ ಎಂದು ತೋರಿಸಿರುತ್ತಾರೆ ಎಂದರೆ ಸರಿಯಲ್ಲ ಮತ್ತು ಗುಡ್ಡೇಹಳ್ಳಿಯಲ್ಲಿ ನನಗೆ ಯಾವುದೇ ಮನೆ ಇಲ್ಲ ಎಂದು ನಮ್ಮ ಅಜ್ಜ ಶಿವಪ್ಪನವರು ನಮೂದು ಮಾಡಿರುತ್ತಾರೆಂದರೆ

ಸರಿಯಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದನ್ನು ತಹಶೀಲ್ದಾರ್ ನ್ಯಾಯಾಲಯ, ಹೊನ್ನಾಳಿ ರವರ ನಡವಳಿಕೆಗಳು ಎಂದು ಒಪ್ಪಿಕೊಂಡಿದ್ದು, ಅದನ್ನು ಈಗ ನಿಪಿ 54 ಎಂದು ಗುರುತಿಸಲಾಯಿತು. ನನ್ನ ತಂದೆಯವರಿಗೆ ಮನೆ ಇಲ್ಲ ಎಂದು ಶಿಕಾರಿಪುರ ತಾಲ್ಲೂಕು ಕಾಗಿನಲ್ಲಿಯಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ಸರ್ವೆ ನಂ.112 ರಲ್ಲಿ ನನ್ನ ಅಜ್ಜನಿಗೆ 13 ಗುಂಟೆ, ದೊಡ್ಡ ಅಜ್ಜ ಹನುಮಂತಪ್ಪನವರಿಗೆ 13 ಗುಂಟೆ ಮತ್ತು ಚಿಕ್ಕ ಅಜ್ಜ ವೀರಪ್ಪನವರಿಗೆ 13 ಗುಂಟೆ ಹಿಸ್ಸೆ ಮೂಲಕ ಬಂದಿದೆ ಎಂದರೆ ಸರಿಯಲ್ಲ. ಸದರಿ ಹಿಸ್ಸೆಯಂತೆ ನನ್ನ ದೊಡ್ಡ ಅಜ್ಜ ತೀರಿಕೊಂಡ ನಂತರ ಅವರ ಮಗ ಈಶ್ವರಪ್ಪ ಅವರ ಹೆಸರಿಗೆ ಖಾತೆಯಾಗಿದ್ದು, ಪ್ರಸ್ತುತ ಅಲ್ಲೇ ವಾಸವಾಗಿರುತ್ತಾರೆ ಎಂದರೆ ವಾಸವಿರುತ್ತಾರೆ ಆದರೆ ಖಾತೆಯಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.112 ರಲ್ಲಿ 13 ಗುಂಟೆ ಹಿಸ್ಸೆಯಲ್ಲಿ ವಾದಿಯವರು ಮನೆ ಕಟ್ಟಿಕೊಂಡು ವಾಸವಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ 2 ನೇ ಪ್ರತಿವಾದಿ ನನ್ನ ಚಿಕ್ಕಜ್ಜ ವೀರಪ್ಪನವರಿಂದ ಬಂದಂತಹ 13 ಗುಂಟೆಯಲ್ಲಿ ಮನೆ ಕಟ್ಟಿಕೊಂಡು ವಾಸವಿರುತ್ತಾರೆಂದರೆ ಸರಿಯಲ್ಲ. ದಿಃ 18.04.1983 ರಲ್ಲಿ ಒಟ್ಟು ಕುಟುಂಬದ ಆಸ್ತಿಗಳು ವಿಭಾಗ ಮಾಡಿಕೊಂಡಿದ್ದು, ಅದರಂತೆ ಎಲ್ಲರೂ ಅವರವರ ಹಿಸ್ಸೆಯಲ್ಲಿ ವಾಸವಿರುತ್ತಾರೆ ಎಂದರೆ ಸರಿಯಲ್ಲ. ಪ್ರಸ್ತುತ ಒಟ್ಟು ಕುಟುಂಬದಲ್ಲಿ ಹಿಸ್ಸೆ ಮಾಡಿಕೊಳ್ಳಲು ಯಾವುದೇ ಪಿತ್ರಾರ್ಜಿತ ಸ್ವತ್ತುಗಳು ಭಾಕಿ ಉಳಿದಿಲ್ಲ ಎಂದರೆ ಸಾಕ್ಷಿಯು ಯಾವುದೇ ವಿಭಾಗ ಆಗಿಲ್ಲ ಎಂದು ನುಡಿಯುತ್ತಾರೆ. ವಾದಿಗೆ ಬಂದಂತಹ 13 ಗುಂಟೆಗೆ ಸಂಬಂಧಿಸಿದಂತೆ ವಾದಿಯು ಖಾತೆಯ ಬದಲಾವಣೆಗೆ ಹಾಕಿಕೊಂಡಾಗ ನಾನು ತಾಲ್ಲೂಕು ಕಛೇರಿಯಲ್ಲಿ ಇದ್ದಿದ್ದರಿಂದ ಖಾತೆಯನ್ನು ತಡೆದಿರುತ್ತೇನೆಂದರೆ ಸರಿಯಲ್ಲ. ಆ ಕಾರಣಕ್ಕಾಗಿಯೇ ಸರ್ವೆ ನಂ.112 ಕ್ಕೆ ಸಂಬಂಧಿಸಿದಂತೆ ಮಾಲೀಕತ್ವ ಘೋಷಣಾತ್ಮಕ ದಾವೆಯನ್ನು ಹೂಡಿರುತ್ತಾರೆಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯು ಮನೆ ಕಟ್ಟಿಕೊಂಡು ವಾಸವಿದ್ದರೂ ಸಹ ನಾನು ಉದ್ದೇಶಪೂರ್ವಕವಾಗಿ ಬೇರೆಯವರನ್ನು ಅಲ್ಲಿಗೆ ಕಳುಹಿಸಿ , ವಾದಿಗೆ ತೊಂದರೆ ನೀಡುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.**

**ಓ. ಹೇ. ಕೇ. ಸ. ಇದೆ.**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಜೆ.ಎಂ.ಎಫ್.ಸಿ., ಹೊನ್ನಾಳಿ.**